ಅಧ್ಯಕ್ಷರು.—ಇವೊತ್ತು ಸಾಯಂಕಾಲದೊಳಗೆ ಅಥವಾ ನಾಳೆ ಉತ್ತರ ಒದಗಿಸುತ್ತೇವೆಂದು ಮಾನ್ಯ ಮಂತ್ರಿಗಳೇ ತಿಳಿಸಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಹಿಂದೆ ಕೂಡ ಇದೇ ರೀತಿ ಉತ್ತರ ಹೇಳುತ್ತೇವೆಂದು ಹೇಳಿದ್ದರು ಈ ಬಗ್ಗೆ ಇನ್ನೂ ನಮಗೆ ಉತ್ತರ ಬಂದಿಲ್ಲ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೆ, ಮಾನ್ಯ ಅರಣ್ಯ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಅವರು ಬಂದತಕ್ಷಣ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ಇಲ್ಲಿ ಇಲ್ಲ ಎನ್ನುವ ಪ್ರಶ್ನೆ ಅಲ್ಲ. ನಿಮ್ಮ ಉತ್ತರ ಯಾವಾಗಲೂ ಒಂದೇ ತರಹ ಇರುತ್ತದೆ. ತಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬೇಕು

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳೋಣ

೨-೩೦ ಪಿ. ಎಂ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು, ಬಿ. ಜಿ. ಪುರ ಹೋಬಳಿ, ಕಲ್ಯಾಣಿ ಕೊಪ್ಪಲು ಗ್ರಾಮದ ನಿವಾಸಿ ಮಾದಯ್ಯನನ್ನು ಕೊಲೆ ಮಾಡಿರುವ ಬಗ್ಗೆ

ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು, ಬಿ. ಜಿ. ಪುರ ಹೋಬಳಿ ಕಲ್ಯಾಣಿ ಕೊಪ್ಪಲು ಗ್ರಾಮದ ನಿವಾಸಿ ಗಾರೆ ಕೆಲಸ ಮಾಡುವ ಬಿ.ಡಿ.ಮಾದಯ್ಯ ಎಂಬುವನನ್ನು ಲಿಂಗರಾಜು ಎಂಬುವನು ಗಾರೆ ಕೆಲಸಕ್ಕೆ ಅಂತ ಕರೆದುಕೊಂಡು ಹೋಗಿದ್ದು ಸುಮಾರು ಐದು ದಿನಗಳ ನಂತರ ಸದರಿ ಮಾದಯ್ಯನನ್ನು ಮರಕ್ಕೆ ನೇತು ಹಾಕಿರುವುದಾಗಿ ಆಕ್ಕಪಕ್ಕದ ಜನರು ಮಾದಯ್ಯನ ಪತ್ನಿ ಮಹದೇವಮ್ಮನಿಗೆ ತಿಳಿಸಿದ ನಂತರ, ಮಹದೇವಮ್ಮ ಸ್ಥಳಕ್ಕೆ ಹೋಗಿ ಮರಕ್ಕೆ ನೇತು ಬಿದ್ದಿದ್ದುದು ಮಾದಯ್ಯನೇ ಎಂಬುದನ್ನು ಖಾತರಿ ಪಡಿಸಿಕೊಂಡ ನಂತರ ಪೋಲೀಸರಿಗೆ ಹಾಗೂ ವೈದ್ಯರಿಗೆ ದೂರು ಕೊಟ್ಟು ಅವರು ಮಹಜರು ನಡೆಸಿ ಶವಪರೀಕ್ಷೆ ನಡೆಸಿದರು. ಈ ಬಗ್ಗೆ ಲಿಂಗರಾಜುವಿನ ಮೇಲೆ ಅನುಮಾನವಿದೆ. ಎಂದು ಪೋಲೀಸರು ಠಾಣೆಯ ಉಪನಿರೀಕ್ಷಕರಿಗೆ ತಿಳಿಸಿದ್ದಾಗ್ಯೂ ಯಾವ ಕ್ರಮವನ್ನೂ ತೆಗೆದುಕೊಂಡಿರುವುದಿಲ್ಲ ಈ ವಿಷಯವನ್ನು ಮಹದೇವಮ್ಮ ಮಾನ್ಯ ಮುಖ್ಯಮಂತ್ರಿಯವರಿಗೆ ದೂರು ನೀಡಿ ಲಿಂಗರಾಜು, ವೈದ್ಯರು ಹಾಗೂ ಪೋಲೀಸರು ಠಾಣೆಯ ಉಪನಿರೀಕ್ಷಕರ ಮೇಲೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಆದ್ದರಿಂದ ಈ ಬಗ್ಗೆ ಸರಕಾರ ಕೂಡಲೇ ಕ್ರಮ ಕೈಕೊಂಡು ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸಿ ಮಹದೇವಮ್ಮನಿಗೆ ಸೂಕ್ತ ಸಹಾಯ ನೀಡಬೇಕೆಂದು ಸರಕಾರವನ್ನು ಒತ್ತಾಯಿಸಲು ಈ ಸೂಚನೆ ನೀಡಲಾಗಿದೆ

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹಸಚಿವರು).—ಈಗಾಗಲೇ ಸಿ.ಓ.ಡಿ.ಗೆ ಇದರ ಬಗ್ಗೆ ತನಿಖೆ ಮಾಡುವುದಕ್ಕೆ ಆರ್ಡರ್ ಮಾಡಿದ್ದೇವೆ.

ಬೆಂಗಳೂರು ನಗರದಲ್ಲಿ ಸಿನಿಮಾ ಮಂದಿರಗಳನ್ನು ಮುಚ್ಚಿರುವುದರಿಂದ ಅಲ್ಲಿ ಕೆಲಸ ಮಾಡುತ್ತಿದ್ದ ನೌಕರರಿಗೆ ತೊಂದರೆಯುಂಟಾಗಿರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಕಳೆದ ೧೦ ದಿವಸದಿಂದ ಬೆಂಗಳೂರಿನಲ್ಲಿ ಸಿನಿಮಾ ಮಂದಿರಗಳಲ್ಲಿ ಕೆಲಸ ಮಾಡುವ ನೌಕರರು ಹೈಕೋರ್ಟ್ ತೀರ್ಪಿನಂತೆ ಅವರಿಗೆ ಕೊಡಬೇಕಾದ ಸಂಬಳ ಕೊಡಬೇಕೆಂದು ಚಳುವಳಿ ನಡೆಸುತ್ತಿದ್ದು ಎಲ್ಲ ಚಿತ್ರ ಮಂದಿರಗಳು ಬಂದ್ ಆಗಿವೆ.

ಇದರ ಕಾರಣ ನಿನ್ನೆ ನಗರದ ಕಪಾಲಿ ಚಿತ್ರ ಮಂದಿರದ ಮುಂದೆ ಮುಂಗಡ ಟಿಕೆಟ್ ಕೊಡಲಿಲ್ಲ ವೆಂಬ ಕಾರಣ ಚಿತ್ರ ಪ್ರೇಮಿಗಳು ಸಿಟ್ಟಿಗೆದ್ದು ರಸ್ತೆಗಳಲ್ಲಿ ಓಡಾಡುತ್ತಿದ್ದ ವಾಹನಗಳಿಗೆ ಕಲ್ಲು ತೂರಿ ಅಲ್ಲಲ್ಲಿ ಗಲಭೆ ಆದ ಸಂಗತಿಗಳು ಪತ್ರಿಕೆಯಲ್ಲಿ ಪ್ರಕಟವಾಗಿದೆ.